# ಮಿಂಚಿದ ಹುಳ



■ ಚಿತ್ರ–ಲೇಖನ:
**ಪ್ರಸಾದ್ ಶೆಣೈ ಆರ್.ಕೆ**



**ಕ**ಳೆದ ಜುಲೈ ತಿಂಗಳ ಮಳೆ ಸಣ್ಣಗೆ ತೊಯ್ಯುವಾಗ ತೋಟದಲ್ಲಿ ಯಾವುದೋ ಕ್ರೋಟಾನು ಎಲೆಗಳ ತುದಿಯಲ್ಲಿ ಏನೋ ಮಿರಿ ಮಿರಿ ಮಿಂಚುತ್ತಿರುವುದು ಕಾಣಿಸಿತು. ಏನು ಅಂತ ಕ್ಯಾಮರಾ ಹಿಡಿದು ಗಿಡದತ್ತ ಹೋದಾಗ ಅಲ್ಲಿ ಹಸಿರು ಹುಳವೊಂದು ಠಿಕಾಣಿ ಹೂಡಿತ್ತು. ಅದರ ಬಿಂಕ ನೋಡಿ ಸೋಜಿಗವಾಯಿತು. ಕೇಸರದಂತಹ ಕೆಂಪು ರೋಮಗಳಿಂದ ಮೈ ತುಂಬಿಕೊಂಡ ಆ ಹುಳ ಆಗ ತಾನೇ ಸೀಳಿ ಬಂದ ಸೂರ್ಯನ ಕಿರಣಗಳಿಗೆ ಮೈಕೊಟ್ಟು ಪ್ರಾಣಾಯಾಮ ಮಾಡಿದಂತೆ ಕಾಣುತ್ತಿತ್ತು.

ತುಂಬಾ ಹತ್ತಿರದಿಂದ ಕಣ್ತುಂಬಿ ಕೊಳ್ಳೋಣ ಅಂತ ಹೋದಾಗ ಅದರ ಬಿಂಕ ಬಿನ್ನಾಣ ನೋಡಿ ಅಚ್ಚರಿಯಾಯಿತು. ಮರುದಿನವೂ ಆ 'ಶೈನಿಂಗ್ ಹುಳ'ವನ್ನು ಗಮನಿಸಿದೆ. ಅದು ವಿರಾಜಮಾನವಾಗಿದ್ದ ಹಸಿರೆಲೆ ರೂಪ ಕಳಕೊಂಡಿತ್ತು. ಹುಳ ಮಾತ್ರ ಅದೇ ಲಯದಲ್ಲಿ ಧ್ಯಾನಸ್ಥವಾಗಿತ್ತು. ಸುಮಾರು ಆರೇಳು ದಿನಗಳ ಕಾಲ ಗಮನಿಸಿದೆ. ಅದು ಅಲ್ಲಿಂದ ಕದಲಲೇ ಇಲ್ಲ. ಆದರೆ ಇನ್ನೆರಡು ದಿನ ಕಳೆದ ಮೇಲೆ ನೋಡಿದರೆ ಅದರ ಹಸಿರೆಲ್ಲವೂ ಬಿದ್ದು ಹೋಗಿ ಬಿಂಕದ ದೇಹವೆಲ್ಲಾ ಎಲ್ಲೋ ಆವಿಯಾಗಿ ಹೋಗಿತ್ತು. ಅದು ಹಿಂದೆ ಕುಳಿತ ಭಂಗಿಯಲ್ಲಿಯೇ ಅದರ ಬಿಳಿ ಹೊರ ಕವಚ ಮಾತ್ರ ಅಂಟಿಕೊಂಡಿತ್ತು!

ಇದೊಂದು ಜಾತಿಯ ಕಂಬಳಿ ಹುಳ ಅಂತ ಆನಂತರ ತಿಳಿಯಿತು. ಕಂಬಳಿ ಹುಳ ಕೋಶಾವಸ್ಥೆಗೆ ಅಣಿಯಾದಾಗ ಹಾಲ್ರಸದ ಎಲೆಗಳನ್ನು ತಿಂದು ಕೋಶಾವಸ್ಥೆಗೆ ಬೇಕಾದ ಶಕ್ತಿಯನ್ನು ಕೊಬ್ಬಿನ ರೂಪದಲ್ಲಿ ತಯಾರಿಸಿಕೊಳ್ಳುತ್ತವೆ. ತನ್ನ ಮೈಯ ಸುತ್ತ ನೂಲಿನ ಎಳೆಗಳನ್ನು ಸುತ್ತಿಕೊಂಡು ಅನಂತರ ಹಾರ್ಮೋನುಗಳ ಬದಲಾವಣೆಯಿಂದ ಚಿಟ್ಟೆಯಾಗಿ ಹೊರಬರುತ್ತದೆ ಎನ್ನುವುದನ್ನು ಎಲ್ಲೋ ಓದಿದ್ದೆ. ಆದರೆ ಅಷ್ಟು ದಿನಗಳ ಕಾಲ ಗಿಡದ ಮೇಲೆ ವೈಯಾರದಿಂದ ಕೂತಿದ್ದ ಈ ಶೈನಿಂಗ್‌ಹುಳದ ಅವಸಾನ ಹೇಗಾಯಿತು.. ಎನ್ನುವ ಪ್ರಶ್ನೆಗೆ ಉತ್ತರ ಹೊಳೆಯಲೇ ಇಲ್ಲ. ಆ ಹುಳ ಇಲ್ಲೇ ಎಲ್ಲಾದರೂ ಕಣ್ಣಾಮುಚ್ಚಾಲೆ ಆಡುತ್ತಿರಬಹುದಾ.. ಅಂತ ಗಿಡಗಳ ಮಗ್ಗುಲಲ್ಲೆಲ್ಲಾ ಜಾಲಾಡಿದರೂ ಆ ಶೈನಿಂಗ್ ಹುಳ ಮಾತ್ರ ಮತ್ತೆ ಕಣ್ಣಲ್ಲಿ ಮಿಂಚಲಿಲ್ಲ.